ಬಲು ತಾತ್ಸಾರ. ಬೇವು, ಹಾಗಲ ಇಂಥವೆಲ್ಲ ಅಧರಕ್ಕೆ ಕಹಿ ಉದರಕ್ಕೆ ಸಿಹಿಯಾಗಿದ್ದರೂ ಇವುಗಳನ್ನು ಬಯಸುವವರು ಕಮ್ಮಿಯೇ. ದಿನದ ಮೂರು ಹೊತ್ತಿನ ಊಟಕ್ಕೆ ಒಂದೇ ಬಗೆಯ ತಿನಿಸಾದರೆ ನಾಲಗೆ ಒಪ್ಪುವುದಿಲ್ಲ. ನಾನಾ ಬಗೆಯ ಭಕ್ಷ್ಯಗಳನ್ನು ಬಯಸುತ್ತದೆ. ನಾಲಗೆಯ ರುಚಿಯನ್ನು ತಣಿಸಲಿಕ್ಕೆ ನಾವು ಎಷ್ಟೆಲ್ಲ ಕಾಡನ್ನು ಸಪಾಟು ಮಾಡಿಲ್ಲ?

ಬಯಲುಸೀಮೆಯಲ್ಲಿ ಜನ್ಮ ತಳೆದವರ ಬಾಳಿನಲ್ಲಿ ಎದೆಯಾಲಿನೊಂದಿಗೆಯೆ ಬೇವಿನ ನಂಟು ಬೆಳೆಯುತ್ತದೆ. ನಮ್ಮ ಊರಿನಲ್ಲಿ ತಾಯಿಯರು ಬೆಳೆಯುತ್ತಿರುವ ಮಕ್ಕಳಿಗೆ ಎದೆಯಾಲು ಬಿಡಿಸಲು ತಮ್ಮ ಪಿಯೂಷಕಲಶಗಳಿಗೆ ಬೇವಿನ ಸೊಪ್ಪಿನ ರಸವನ್ನು ಸವರಿಕೊಂಡು ತಮ್ಮ ಕರುಳಕುಡಿಗಳನ್ನು ಸ್ವಾವಲಂಬಿಗಳನ್ನಾಗಿಸಲು ಪಣ ತೊಡುತ್ತಾರೆ. ನನ್ನ ಮುತ್ತಜ್ಜಿ ಬೇವಿನ ಬೀಜಗಳನ್ನು ಎಣ್ಣೆಯಲ್ಲಿ ಕುದಿಸಿ ತಲೆಗೆ ಹಚ್ಚಿಕೊಳ್ಳುತ್ತಿದ್ದಳು. ತಲೆಯಲ್ಲಿನ ಕೀಟಗಳನ್ನು ಬೇಟೆಯಾಡಲು ಹೀಗೆ ಮಾಡುತ್ತಿದ್ದಳೆಂದು ತೋರುತ್ತದೆ. ಅವ್ವ ಯುಗಾದಿಯಲ್ಲಿ ಹರಳೆಣ್ಣೆಯೊಂದಿಗೆ ಬೇವಿನೆಲೆಗಳನ್ನು ಬೆರೆಸಿ ಕೆಂಡದಲ್ಲಿ ಕುದಿಸಿ ಕಾಯಕ್ಕೆಲ್ಲ ಬಳಿದು ನನ್ನ ಮೈತೊಳೆಯುತ್ತಿದ್ದಳು.

ಬಯಲುಸೀಮೆಯಲ್ಲಿ ಯಾರೂ ನೆಟ್ಟು ಬೆಳೆಸದೇ ಇದ್ದರೂ ಯಥೇಚ್ಛವಾಗಿ ಬೆಳೆಯುವ ಮರಗಳು ಎರಡು; ಒಂದು ಬೇವು, ಇನ್ನೊಂದು ಹುಣಸೆ. ಆದರೆ ಇಲ್ಲಿಯೂ



ತಾರತಮ್ಯ ಮನೆ ಮಾಡಿದೆ. ಸೊಗಸಾದ ಹುಳಿಯನ್ನು ಕೊಡುವ ಹುಣಸೆಮರದ ಜೊತೆಗೆ ದೆವ್ವವನ್ನೂ, ರೋಗಶಮನ ಮಾಡುವ ಬೇವಿಗೆ ಚೌಡಿಯನ್ನೂ ಜೋಡಿಸಲಾಗಿದೆ. ಬರೀ ಗಾಳಿಯನ್ನು ಬಿಡುವ ಅಶ್ವತ್ಥ ವೃಕ್ಷಕ್ಕಿರುವಷ್ಟು ಮಾನ್ಯತೆ ಜೀವದಯಾಪರವಾಗಿರುವ ಬೇವು-ಹುಣಸೆಗಳಿಗಿಲ್ಲ. ಜಾಗತಿಕ ಮಾರುಕಟ್ಟೆಯಲ್ಲಿ 'ಈ ಸೋಪನ್ನು ಬೇವು ಮತ್ತು ಆಲೋವೆರಾಗಳಿಂದ ತಯಾರಿಸಲಾಗಿದೆ' ಎಂದು ಜಾಹೀರು ಮಾಡಿದರೆ ಮಾತ್ರ ಜನ ಮುಗಿಬಿದ್ದು ಕೊಳ್ಳುತ್ತಾರೆ. ಆಲ, ಮಾವು, ತೆಂಗು, ಕಂಗು, ಗಂಧ ಇವೆಲ್ಲ ಲೋಕಮಾನ್ಯ ಮರಗಳು. ಆದರೆ ಬೇವು, ಹುಣಸೆ, ಜಾಲಿ, ಮುತ್ತುಗದ ಮರಗಳು ನಿರ್ಲಕ್ಷಿತ. ಆಡಂಬರದ ಕಾರ್ಯಕ್ರಮಗಳಲ್ಲಿ ವಿಐಪಿಗಳನ್ನು ಆಧರಿಸಿ ಸಾಮಾನ್ಯರನ್ನು ಅನಾದರಿಸುವಂತೆ ಭಾರತೀಯರ ಬದುಕಿನಲ್ಲಿ ಅಶ್ವತ್ಥ, ಆಲ, ತೆಂಗು, ಕಂಗುಗಳಿಗೆ ವಿಪರೀತ ಪೋಷಣೆ ಕೊಟ್ಟು ಪವಿತ್ರ ವೃಕ್ಷಗಳನ್ನಾಗಿಸಿ ಬೇವು, ಜಾಲಿ, ಹುಣಸೆಯಂಥವುಗಳನ್ನು ತುಚ್ಛೀಕರಿಸಲಾಗಿದೆ.

ನಿಸರ್ಗದ ಸಂಪತ್ತುಗಳನ್ನು ವಿಐಪಿಗಳು ಮನಸೋ ಇಚ್ಛೆ ಕೊಳ್ಳೆ ಹೊಡೆಯುತ್ತಿದ್ದರೆ ಜನಸಾಮಾನ್ಯರು ಕುಡಿಯುವ ನೀರಿಗೆ ಬವಣೆ ಪಡುತ್ತಿರುತ್ತಾರೆ. ಕವಿಯೊಬ್ಬರು 'ನಾನೊಂದು ಮರವಾಗಿದ್ದರೆ ಹಕ್ಕಿಯು ಗೂಡು ಕಟ್ಟುವ ಮುನ್ನ ನೀನು ಯಾವ ಕುಲವೆಂದು ಕೇಳುತ್ತಿರಲಿಲ್ಲ?' ಎಂದು ಶ್ರೇಣೀಕರಣದ ಸಮಾಜದಲ್ಲಿ ಮನುಷ್ಯನಾಗುವುದಕ್ಕಿಂತಲೂ ಮರವಾಗುವುದೇ ಲೇಸೆಂದರು. ಆದರೆ ಈ ಮಾನವ ಪ್ರಾಣಿ ಚರಾಚರಗಳೆಲ್ಲವಕ್ಕೂ ಶ್ರೇಷ್ಠ-ಕನಿಷ್ಠ ಎಂಬ ತರತಮಗಳ ಲೇಬಲ್ಲನ್ನು ಅಂಟಿಸಿಬಿಟ್ಟಿದ್ದಾನಲ್ಲ! ಹಾಗಾಗಿ ಮದ್ದರೆಯಬೇಕಿರುವುದು ಮೇಲುಕೀಳಿನ ಜ್ವರ ತಗುಲಿ ಅದನ್ನೇ ಕನವರಿಸುತ್ತಿರುವಂತಹ ಶ್ರೇಷ್ಠತೆಯ ವ್ಯಸನಿಗಳ ಮೆದುಳಿಗೆ.

ನಮ್ಮ ಆದಿಕವಿ ಮಾವಿನ ಬೆಡಗುಬಿನ್ನಾಣಗಳ ಬಗ್ಗೆ ದೀರ್ಘವಾಗಿ ಬರೆದ. ಆದರೆ ಈ ಬಯಲು ಕನ್ಯೆಯನ್ನು ಬಿಟ್ಟುಬಿಟ್ಟ. ಕರಾವಳಿ-ಮಲೆನಾಡುಗಳಲ್ಲಿ ಬೇವು-ಹುಣಸೆ ಈಗಲೂ ವಿರಳ. ಆದರೆ ನಮ್ಮ ಸೀಮೆಯ ಎಲ್ಲ ಹಬ್ಬ, ಜಾತ್ರೆ ಮುಂತಾದ ಸಡಗರ ಸಂಭ್ರಮಗಳಿಗೆ ಮಾವಿನಷ್ಟೇ ಬೇವೂ ಮುಖ್ಯ. ಬಾಗಿಲಿಗೆ ಅಲಂಕರಿಸುವ ಮಾವಿನ ತೋರಣದ ಎರಡು ತುದಿಗಳಿಗೆ ಬೇವಿನ